Ex.25-2019
PW 1

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 15.06.2026**

**ಪಾಟೀ ಸವಾಲುಃ ತೀರ್ಪುದಾರರ ಪರ ಶ್ರೀ ಹೆಚ್ ಸಿ ಎಂ ಕೆ ವಕೀಲರಿಂದ**

**1.** ಮೂಲ ಸರ್ವೆ ನಂಬರ 14 ಈಗ ಪೋಡಾಗಿ ಸರ್ವೆ ನಂ 14/2 ಆಗಿರುತ್ತದೆ ಎಂದರೆ ಸಾಕ್ಷಿಯು ನಮ್ಮ ಸೋದರ ಅತ್ತೆಗೆ ನಮ್ಮ ತಂದೆ ಕೊಟ್ಟಿರುತ್ತಾರೆ ಎಂದು ನುಡಿದರು. ಹಾಲಿ ನನ್ನ ತಂದೆಯ ಹೆಸರಿನಲ್ಲಿ ಸರ್ವೆ ನಂ 14/1 ರಂತೆ ಆರ್ ಟಿ ಸಿ ನಡೆಯುತ್ತಿರುತ್ತದೆ ಎಂದರೆ ಗೊತ್ತಿಲ್ಲ. **ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲಾತಿಯು ನನ್ನ ತಂದೆಯ ಹೆಸರಿನಲ್ಲಿರುವ ಆರ್ ಟಿ ಸಿ ಎಂದು ಒಪ್ಪಿದ ಮೇರೆಗೆ ನಿಡಿ 1 ಎಂದು ಗುರುತಿಸಲಾಯಿತು.** ಸರ್ವೆ ನಂ 14/1 ರಲ್ಲಿ ಒಟ್ಟು ನಾಲ್ಕುವರೆ ಎಕರೆ ಜಾಗ ಇದ್ದು ಅದರಲ್ಲಿ ನನ್ನ ತಂದೆಯ ಹೆಸರಿನಲ್ಲಿ ನಿಡಿ 1 ರಂತೆ ಎರಡೂವರೆ ಎಕರೆ ಮತ್ತು ಡಿಕ್ರಿದಾರರ ಹೆಸರಿನಲ್ಲಿ ಎರಡು ಎಕರೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಎರಡು ಎಕರೆ ಜಾಗಕ್ಕೆ ತೊಂದರೆ ಕೊಡಬಾರದು ಎಂದು ನ್ಯಾಯಾಯದಿಂದ ಆದೇಶ ನೀಡಿದ್ದು ಆದರೂ ನಾವು ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ.

2. ಡಿಕ್ರಿದಾರರ ಜಾಗದ ಚೆಕ್ಕುಬಂದಿ ಪೂರ್ವಕ್ಕೆ ಸರ್ವೆ ನಂ 14 /2 ರ ಉಳಿಕೆ ಜಾಗ , ಪಶ್ಚಿಮಕ್ಕೆ ಸರಕಾರ ಓಣಿ ಮತ್ತು ನಮ್ಮಗಳ ಉಳಿಕೆ ಜಾಗ , ಉತ್ತರಕ್ಕೆ ನಲ್ಲೂರುಮ್ಮನ ದೇವಸ್ಥಾನ ಮತ್ತು ರಸ್ತೆ ಮತ್ತು ದಕ್ಷಿಣಕ್ಕೆ ಎಸ್ ಸಿ ಶಿವಣ್ಣರವರ ಭಾಗ ಶ್ರೀ ಲಕ್ಕಪ್ಪ ರವರ

ಬಾಬ್ತು ಜಾಗ ಇದೆ ಎಂದರೆ ಸಾಕ್ಷಿಯು ಚೆಕ್ಕುಬಂದಿ ಸರಿಯಿದ್ದು ಆದರೆ ಡಿಕ್ರಿದಾರರಿಗೆ ಯಾವುದೆ ಜಾಗ ಬರೆದುಕೊಟ್ಟಿರುವುದಿಲ್ಲ ಎಂದು ನುಡಿದರು. ಕಂದಾಯ ಇಲಾಖೆಯವರು ಸರ್ವೆ ನಂ ಬದಲಾವಣೆ ಮಾಡಿದಾರೂ ಸಹ ಮೇಲೆ ತಿಳಿಸಿದ ಚೆಕ್ಕುಬಂದಿಯಲ್ಲಿ ಬರುವ ಜಾಗಕ್ಕೆ ನಾನು ತಕರಾರು ಮಾಡಲು ಅಧಿಕಾರ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ